# ಪರ್ಯಾಯ ಸಾರಿಗೆ




■ ಕೆ ಪಿ ಸತ್ಯನಾರಾಯಣ

ಭಾರೀ ಮಳೆಯಿಂದಾಗಿ ನಮ್ಮೂರಿನ ರಸ್ತೆಗಳು ಪ್ರವಾಹಪೀಡಿತವಾಗುವುದು ಮಾಮೂಲಿನ ವಿಚಾರ ಎಂಬುದನ್ನು ಹೊಸದಾಗಿಯೇನೂ ಹೇಳಬೇಕಿಲ್ಲವಷ್ಟೇ. ರಸ್ತೆಗಳೆಲ್ಲಾ ನೀರಿನಡಿ ಸೇರಿಹೋಗಿ ರಸ್ತೆ ಯಾವುದೋ ಚರಂಡಿ–ರಾಜಕಾಲುವೆ ಯಾವುದೋ ತಿಳಿಯದೆ ಅನೇಕ ವಾಹನಗಳು ನೀರು ಕುಡಿದು, ಮನುಷ್ಯರಿಗೂ ಕುಡಿಸಿ ಅನಾಹುತಗಳಾಗುವುದು ಸರ್ವವಿದಿತ. ಎಡೆಬಿಡದೆ ಸುರಿವ ಮಳೆ, ಬಾರದ ಬಸ್ಸುಗಳು, ರಿಕ್ಷಾಗಳು, ರಸ್ತೆಯಲ್ಲಿ ದ್ವಿಚಕ್ರವಾಹನಗಳು ಅರ್ಧ ಮುಳುಗುವಷ್ಟು ನೀರು. ಜನರು ಕಂಗೆಟ್ಟರು.

ಜನರನ್ನು ಒಂದೆಡೆಯಿಂದ ಮತ್ತೊಂದೆಡೆಗೆ (ಶತಾಯಗತಾಯ) ಕೊಂಡೊಯ್ಯುವ ತಮ್ಮ ಪವಿತ್ರ ಕಾಯಕಕ್ಕೆ ಅಡ್ಡಿಯಾಗುತ್ತದಲ್ಲಾ ಎಂದು ನಗರಸಾರಿಗೆಯವರು ಚಿಂತಾಕ್ರಾಂತರಾದರು. ಬಸ್ಸುಗಳು ಅಲ್ಲಲ್ಲೇ ಕೆಟ್ಟು ನಿಲ್ಲುವುದು, ಜನರೂ ಬಸ್ಸು ಹತ್ತಲು ಭಯಪಡುವುದೂ ಅವರ ಚಿಂತೆಗೆ ಮತ್ತಷ್ಟು ಕಾರಣವಾಗಿದ್ದಿತು.